
# ಅಧ್ಯಾಯ 16

ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ



ಛಂದ: ಜಯತು ಜಯ ಮುನಿವಂದ್ಯ ಸದ್ಗುರು ಸಿದ್ಧರಾಜ  ದಯಾಳುವೇ
ಭಯನಿವಾರಕ ನಿನ್ನ ಕೃಪೆಯಿಂದಹುದು ಸಂಸ್ಕೃತಿ ನಾಶವೇ ಮೋಹ
ಸರ್ಪವು ಸುತ್ತಿ ಬಿಗಿದಾಗಜ್ಞ ಬಾಲನ ಬಿಡಿಸಿದೆ ಇಹದ ದುಃಖಗಳಿಂದ
ತಾರಿಸಿ ಶಾಂತಿ ಈಯು ಕಟಾಕ್ಷದಿ |

ಹೇ ಸದ್ಗುರುರಾಯನೇ, ನಿನಗೆ ಜಯಜಯಕಾರವಿರಲಿ. ನಿನ್ನ ದಿವ್ಯ ರೂಪವನ್ನು ನನ್ನ ಅಂತರ್ಯದೊಳಗೆ ನೋಡುವಂತೆ ನನ್ನ ಮೇಲೆ ಅನುಗ್ರಹ ಮಾಡು, ದಯಾಳುವೇ ನಿನ್ನ ಚರಣಗಳಿಗೆ ನಮಿಸುವೆನು. ನೀನು ಕೃಪೆ ಮಾಡಿದಿಯೆಂದರೆ, ಈ ಜಗತ್ರಯದಲ್ಲಿ ಏನು ಆಗಲಿಕ್ಕಿಲ್ಲಾ; ಇಂಥಾ 1ಬ್ರಹ್ಮಾಂಡವನ್ನು ನಿರ್ಮಾಣ ಮಾಡಿದಂಥಾ ಅವಿದ್ಯೆಯು ಕ್ಷಣಾರ್ಧದಲ್ಲಿ ಪರಿಹಾರವಾಗುವದು. ನಿನ್ನ ನಾಮದ ಮಹಿಮಾ ಇಷ್ಟೇ ಎಂದು ಅದಕ್ಕೆ ಉಪಮೆ ಕುಡಲಿಕ್ಕೆ ಸಾಧ್ಯವಿಲ್ಲ. ಯಾವಾತನು ನಿನ್ನ ನಾಮವನ್ನು ಅಖಂಡ ಜಪಿಸುವನೋ ಅವನನ್ನು ಬ್ರಹ್ಮನೇ ಪೂಜಿಸುವನು. ಎಲ್ಲಾ ಪ್ರಕಾರದ ಈಶ್ವರೀ ವಿಭೂತಿಗಳು ಆತನ ಮುಂದೆ ಕೈ ಜೋಡಿಸಿಕೊಂಡು ನಿಂತಿರುತ್ತವೆ, ಮತ್ತು ಐಶ್ವರ್ಯ ಭೋಗಗಳನ್ನು ಮುಂದಿಡುತ್ತವೆ. ಆದರೆ ಆತನು ಅವನ್ನು ಸ್ವೀಕರಿಸಲೊಲ್ಲನು. ಯಾಕೆಂದರೆ ಅವನ ಕಾರ್ಯವು ಮುಂದೆ ಇರುತ್ತದೆ. ಆತನು ಈಶ್ವರನಿಗಿಂತ ಮೇಲಿನ ಸ್ಥಾನವನ್ನು ನೋಡುತ್ತಾನೆ, ಮತ್ತು ಅದನ್ನು ನಾಮಬಲದಿಂದ ಗುರುಕೃಪೆ ಮೂಲಕ ಶೀಘ್ರವಾಗಿ

ಹೊಂದವನು. ಈಶ್ವರನಿಗೆ ಅಧಿಷ್ಠಾನವಾಗಿರುವ, ನಿರ್ಗುಣ, ನಿರ್ವಿಕಾರವಾದ ಬ್ರಹ್ಮತತ್ತ್ವವನ್ನು ಗುರುಕೃಪೆಯಿಂದ ಆತನು ಪ್ರಾಪ್ತಮಾಡಿಕೊಂಡು ದ್ವೈತನಿರಸನವಾಗಿ ಸುಖವನ್ನು ಹೊಂದುತ್ತಾನೆ.ಅಂಥಾ ಸತ್ಪುರುಷನಿಗೆ ಜಗತ್ತು ಸದ್ಗುರು ರೂಪವೇ ಕಾಣಿಸುವದು. ಶುಭ, ಅಶುಭ, ಪುಣ್ಯ, ಪಾಪ , ಎಲ್ಲಾ ಸಮಾನವಾಗಿ ಕಾಣಿಸುವವು. ಆತನು ಹೃದಯದಲ್ಲಿ ಸದಾಕಾಲ ಸುಸ್ವರೂಪವನ್ನು ನೋಡುವಂಥವನಾಗಿ, ಆತನಲ್ಲಿ "ನಾನು- ನೀನು" ಎಂಬ ಭೇದಮತಿಯು ಉಳಿಯಲಾರದು. ಆತನಿಗೆ ಉಚ್ಚನೀಚವೆಂಬವು

ಸಮಾನವಾಗಿರುವವು, ಮಾನಾಪಮಾನಗಳೆಂಬವು ಕಾಣಿಸುವದಿಲ್ಲ, ಮತ್ತು ವಿಧಿನಿಷೇಧ ಜಾಲದಿಂದ ಆತನ ಸ್ಥಾನವು ದೂರವೇ ಇರುತ್ತದೆ. ಆತನು ಸೃಷ್ಟಿಯನ್ನೆಲ್ಲಾ ಆತ್ಮರೂಪವಾಗಿ ನೋಡುತ್ತಾನೆ, ದೇಹ ದುಃಖದಿಂದ ಸಂಕಟಪಡಲಾರನು, ಆದರೆ ಪರದುಃಖವನ್ನು ನೋಡಿದ ಮಾತ್ರದಿಂದ ಆತನ ಹೃದಯವು ದ್ರವಿಸುವುದು. ನಾಮದಲ್ಲಿ ರತನಾಗಿರುವ ಇಂಥಾ ಮಹಾತ್ಮನು ಸದ್ಗುರುನಾಥನನ್ನು

ದೃಢವಾಗಿ ಹಿಡಿದುಕೊಂಡಿರುತ್ತಾನೆ. ಈತನ ಮಹಿಮೆಯು ಅತ್ಯದ್ಭುತವಾಗಿದ್ದು, ಸಹಸ್ರಮುಖನಾದ. ಮಹಾಶೇಷನಿಂದ ಸಹ ವರ್ಣಿಸಲಾಗದು. ಆತನು ಸ್ವರೂಪದಿಂದ ಸದ್ಗುರುನಾಥನೇ ಆಗಿದ್ದರೂ, ಸರ್ವಥಾ ಶಿಷ್ಯಭಾವದಿಂದ ವರ್ತಿಸುತ್ತಿದ್ದು, ನಿರಭಿಮಾನದಿಂದ ಸೇವೆ ಮಾಡುತ್ತಾ ಅಂತರದಲ್ಲಿ ಸದಾ ಶಾಂತಿಯುಕ್ತನಾಗಿರುತ್ತಾನೆ.

ಈ ಮುಂದಿನ ಶ್ರೀ ಸಿದ್ಧಾರೂಢ ಚರಿತ್ರೆ ಕಥನವನ್ನು ಕೇಳುವಂಥವರಾಗಿರಿ. ಇದರ ಶ್ರವಣ ಮನನ ನಿದಿಧ್ಯಾಸನಾದಿಗಳಿಂದ ಪೂರ್ಣ ಜ್ಞಾನವು ಪ್ರಾಪ್ತವಾಗುವದು. ಶ್ರೀ ಸಿದ್ಧಾಶ್ರಮದಲ್ಲಿ ಸ್ತ್ರೀ ಪುರುಷ ಭಕ್ತ ಜನರು ನಿತ್ಯದಲ್ಲಿಯೂ ಭೋಜನ ಪದಾರ್ಥಗಳನ್ನು ತೆಗೆದುಕೊಂಡು ಬರುತ್ತಿರುವರು. ಅವನ್ನು ಮೊದಲು ಸಿದ್ಧಾರೂಢರಿಗೆ ಸಮರ್ಪಿಸಿ, ಅನಂತರ ಎಲ್ಲರೂ ಕೂಡಿ ಶೇಷ ಪ್ರಸಾದವನ್ನು ಭುಂಜಿಸುವರು. ಅವನ್ನು ಮೊದಲು ಸಿದ್ಧಾರೂಢರಿಗೆ ಸಮರ್ಪಿಸಿ, ಅನಂತರ ಎಲ್ಲರೂ ಕೂಡಿ ಶೇಷಪ್ರಸಾದವನ್ನೂ ಭುಂಜಿಸುವರು. ಒಂದಾನೊಂದು

ದಿವಸ ಅನೇಕ ಭಕ್ತರು ಭೋಜನವಾದ  ಬಳಿಕ ಸದ್ಗುರುಗಳ ಸನ್ನಿಧಿಯಲ್ಲಿ ಭಜನ ಮಾಡುತ್ತಿದ್ದು, ಸದ್ಗುರುಗಳು ವಿಶ್ರಾಂತಿ ಸ್ಥಾನಕ್ಕೆ  ತೆರಳಿದ ಮೇಲೆ, ಆ ಜನರು ಕೆರೆದಂಡೆಗಿರುವ ವೃಕ್ಷಗಳ ಛಾಯೆಗೆ ಹೋದರು. ಅಲ್ಲಿ ಗಿಡಗಳ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುವ ಸಮಯದಲ್ಲಿ, ಕೆಲವು ಚಿಕ್ಕ  ಹುಡುಗರು ಆಡುತ್ತಾ ಆಡುತ್ತಾ ಕೆರೆಯ ಹತ್ತಿರ ಬಂದು ಅತ್ತಿತ್ತ ನೋಡುತ್ತಿರುವ ಒಂದು ಸರ್ಪವನ್ನು  ಕಂಡರೂ. ಅದು ಸುಮಾರು ನಾಲ್ಕು  ಮೊಳ ಉದ್ದವಿದ್ದು ಬಿಸಿಲಿನೊಳಗೆ ಬಿದ್ದಿತ್ತು. ಆಗ್ಗೆ ಅವರ ಪೈಕಿ ಒಬ್ಬ  ಹುಡುಗನು ಆ ಸರ್ಪದ ಸಮೀಪ ಹೋಗಿ, ಕುತೂಹಲದಿಂದ ಅದರ ಕಡೆಗೆ ಒಂದು ಕಲ್ಲು ಒಗೆದನು, ಆ ಕಲ್ಲು ಸರ್ಪಕ್ಕೆ  ತಾಗಿ, ಅದು ಮಹಾ ಕ್ರೋಧದಿಂದ ಹೆಡೆಯನ್ನು  ಎತ್ತಿ ಹುಡುಗನನ್ನು  ನೋಡಿ, ತತ್ಕಾಲವೇ ಅವನ ಕಾಲಿಗೆ ಸುತ್ತಿಕೊಂಡು ಬಿಗಿದು ಕಟ್ಟುವಂಥಾದ್ದಾಯಿತು. ಆಮೇಲೆ ಆ ಸರ್ಪವು ಬಹು ಸಿಟ್ಟಿನಿಂದ ಅವನಿಗೆ ಕಡಿಯಲಾರಂಭಿಸಿತು. ಹುಡುಗನಾದರೂ ಅದನ್ನು ಬಿಡಿಸಿಕೊಂಡು ಹೋಗಬೇಕೆಂದು ನೋಡಿದರೆ ಆತನ ಶಕ್ತಿ

ನಡಿಯದಂತಾಯಿತು. ಸರ್ಪವು ಅವನ ಸರ್ವಾಂಗದಲ್ಲಿ ಕಡಿಯುತ್ತಿತ್ತು. ಇದರಿಂದ ಅವನು ವಿಕಳನಾಗಿ ದೀರ್ಘಸ್ವರ ದಿಂದ  ರೋಧನ ಮಾಡಲಾರಂಭಿಸಿದನು. ಇದನ್ನೆಲ್ಲಾ ಕಂಡು ಇತರ ಹುಡುಗರು, ಏನು ಮಾಡಬೇಕೆಂಬುದು ತೋಚದೆ, ಅವನ ತಾಯಿ ತಂದೆಗಳನ್ನು  ಕರಿಯುವಂಥವರಾದರು. ಆ ತಾಯಿ ತಂದೆಗಳು ಬಂದು, ಕಾಲಿಗೆ ಸರ್ಪ ಸುತ್ತಿದ ತಮ್ಮ ಮಗನನ್ನು  ನೋಡಿ, ಬಹಳ ಆಕ್ರಾಂತ ಮಾಡಿದರು. ಹುಡುಗನ ತಾಯಿಯು ಆತನಿಗೆ - 'ಬಾರಪ್ಪಾ  ಮಗುವೇ, ನಿನ್ನನ್ನು  ನೋಡಿ ನನ್ನ  ಜೀವ ಕಸಿವಿಸಿಯಾಗುತ್ತದೆ. ಆ ಹಾವನ್ನು  ಅಲ್ಲೇ ಬಿಟ್ಟು ಬೇಗನೇ ಬಾ, ನನ್ನ  ಕಾಲುಗಳು ಥರಥರನೇ ನಡುಗುತ್ತಿವೆ. ಮತ್ತು ನನಗೆ ಬಹಳ ಭಯವಾಗುತ್ತಿದೆ' ಅಂದಳು. ಆಕೆಯ ಗಂಡನಾದರೂ ಭಯದಿಂದ ಹಿಂದೆ ನಿಂತುಬಿಟ್ಟನು. ದೀರ್ಘಸ್ವರದಿಂದ ತಾಯಿಯು ಅಳುತ್ತಿದ್ದಳು. ತಂದೆಯು ಸಮೀಪ ಹೋಗಲು ಹೆದರುತ್ತಿದ್ದನು. ಇತರ ನೆರದ ಜನರಾದರೂ ಬಹಳ ಗಾಬರಿಯಾಗಿ ಅತ್ತಿತ್ತ ಗಡಬಡಿಸುತ್ತಿದ್ದರು. ಆ ಹುಡುಗನಾದರೂ ಅತ್ತಿತ್ತ ಓಡುತ್ತಾ

ಅಲ್ಲಲ್ಲಿ ಬೀಳುತ್ತಾ ಮತ್ತು ಎದ್ದು ನಿಂತು ಎಷ್ಟು ಪೇಚಾಟಪಟ್ಟರೂ, ಆ ಹಾವು ಅವನನ್ನು ಬಿಡಲೊಲ್ಲದು. ಅಳುತ್ತಿದ್ದ ತಾಯಿಯನ್ನು ನೋಡಿ ತಂದೆಯು - "ನೀನು ವ್ಯರ್ಥ ಯಾಕೆ ಅಳುತ್ತೀ,ಅವನು ತಿಳಿದು ತಿಳಿದು ಸರ್ಪದ ಹತ್ತಿರ ಹೋಗಿದ್ದನು , ಏನು ಯತ್ನ ಮಾಡಿದರೂ , ಅವನು ಸಾಯುವನು, ಅಳಬೇಡ' ಅಂದನು. ಇತರ ಜನರು ಶಂಖಧ್ವನಿ ಮಾಡುತ್ತಿದ್ದರು. ಆದರೆ ಯಾರೊಬ್ಬರಿಗೂ ಸರ್ಪದ ಸಮೀಪ ಹೋಗಲಿಕ್ಕೆ ಧೈರ್ಯವಾಗಲಿಲ್ಲ. ಆಗ ಒಬ್ಬರು ಶ್ರೀ ಸಿದ್ಧಾರೂಢ ಕಡೆಗೆ ಹೋಗಿ ಈ ವರ್ತಮಾನವನ್ನು ತಿಳಿಸಿದರು. ಆ ದಯಾಘನರಾದ ಸಿದ್ಧರು ಇದನ್ನು ಕೇಳಿದಾಕ್ಷಣವೇ ಗಡಬಡಿಸಿ ಓಡಿಬಂದು, ನೋಡಿದರೂ. ಜನರೆಲ್ಲಾ ಬಹಳ ಆಕ್ರಾಂತ ಮಾಡುತ್ತ ಸುಮ್ಮನೆ ನೋಡುತ್ತಿದ್ದರು. ಯಾರೋ ಒಬ್ಬರು ಒಂದು ಉದ್ದವಾದ ಕಟ್ಟಿಗೆಯನ್ನು ತಂದು ಅದರಿಂದ ಆ ಹಾವನ್ನು ಬಿಡಿಸಲಿಕ್ಕೆ ನೋಡುತ್ತಿದ್ದರು. ಆದರೆ ಅದು ಬಿಡಲೊಲ್ಲದು. ಸಮೀಪ ಹೋಗಲಿಕ್ಕೆ ಯಾರೊಬ್ಬರಿಗೂ ಧೈರ್ಯ ಸಾಲುತ್ತಿದ್ದಿಲ್ಲ. ಅಗ ಸಿದ್ಧರು ಜನರನ್ನು ಅತ್ತಿತ್ತ ಸರಿಸಿ,

ನೆಟ್ಟಗೆ ಆ ಬಾಲಕನ ಹತ್ತಿರ ಹೋಗಿ, ಆ ಹಾವಿನ ಹೆಡೆ  ಹಿಡಿದು ಮತ್ತೊಂದು ಹಸ್ತದಿಂದ ಹುಡುಗನನ್ನು ಹಿಡಿಯುವಂಥವರಾದರು. ಆಮೇಲೆ ಸದ್ಗುರುಗಳು ಆ ಹಾವನ್ನು ಸರಕ್ಕನೆ ಜಗ್ಗಿ, ಹುಡುಗನನ್ನು  ಬಿಡುಗಡೆ ಪಡಿಸಿದರು. ಮತ್ತು ಹಾವನ್ನು  ದೂರ ಚಲ್ಲಿದರು, ಅದು ಅಲ್ಲಿ ನಿಶ್ಚೇಷ್ಠಿತವಾಗಿ ಬಿತ್ತು. ಹೇ ಶ್ರೋತಾ ಜನರುಗಳಿರಾ, ನೋಡಿರಿ, ಲೋಕದಲ್ಲಿ ಇದೇ ರೀತಿ ಇರುತ್ತದೆ. ತಂದೆ ತಾಯಿಗಳಿಗೆ ಮಗನ ಮೇಲೆ ಬಹಳ ಪ್ರೇಮವಿರುತ್ತದೆ. ಆದರೆ ಸಂಕಟದಲ್ಲಿ ರಕ್ಷಿಸುವದಕ್ಕೆ ಅವರ್ಯಾರೂ ಬರುವದಿಲ್ಲ. ಸದ್ಗುರುನಾಥನೊಬ್ಬನೇ ನಿಜವಾಗಿ ಮಿತ್ರನಾಗಿರುತ್ತಾನೆ.  ತಮ್ಮ ಕಾರ್ಯವಾಗುವ ತನಕ ಜನರು  "ನನ್ನವನು ನನ್ನವನು " ಎನ್ನುವರು. ಆದರೆ ಸಂಕಟ ಪ್ರಾಪ್ತವಾದಾಗ ಸದ್ಗುರುನಾಥನ ಹೊರ್ತು ಮತ್ತ್ಯಾರೂ ಬರುವುದಿಲ್ಲ. ವಿಪತ್ತಿನೊಳಗೆ ರಕ್ಷಿಸುವಂಥಾ ಸದ್ಗುರು ಒಬ್ಬನೇ ಸ್ನೇಹಿತರಾಗಿರುತ್ತಾನೆ. ಆತನನ್ನು

ಆಶ್ರಯಿಸಿದರೆ, ನಾವು ಎಂದೂ ದುಃಖವನ್ನು  ಕಾಣೆವು. ಜೀವರನ್ನು  ದುಃಖದೊಳಗಿಂದ ಪಾರುಮಾಡುವದಕ್ಕಾಗಿಯೇ

ಆತನ ಅವತಾರವಾಗಿರುತ್ತದೆ. ಆದ್ದರಿಂದ ಎಲ್ಲಿ ತನಕ ಮರಣ ಸಮೀಪ ಬಂದಿಲ್ಲವೋ ಅಷ್ಟರಲ್ಲಿಯೇ ಆತನ ಚರಣಗಳನ್ನು ಹಿಡಿಯಿರಿ. ಆತನು ದಯಾಳು ಇದ್ದಾನೆ, ದೋಷ ಗುಣಗಳನ್ನು ನೋಡುವವನಲ್ಲ, ಶರಣು ಬಂದ ಮಾತ್ರದಿಂದ ಆತನು ತಾರಿಸುತ್ತಾನೆ. ಇತ್ತ ಸದ್ಗುರುಗಳು ಹುಡುಗನ ಮೈ ಮೇಲೆಲ್ಲಾ ತಮ್ಮ ಅಮೃತ ಹಸ್ತವನ್ನು ಆಡಿಸಿದ ಮಾತ್ರದಿಂದ ಅವನು ಸ್ವಸ್ಥನಾದನು. ಆಗ ಆ ಮಹಾತ್ಮರು ಹುಡುಗನ ಕೈ ಹಿಡಿದು ಮಠದೊಳಗೆ ಕರೆದುಕೊಂಡು ಹೋಗಿ ಆತನ ಶರೀರಕ್ಕೆ ಪ್ರಸಾದ ವಿಭೂತಿ ಹಚ್ಚಿ - "ಎಲೆ ಬಾಳಾ, ನಿನಗೆ ಇನ್ನು ಮೇಲೆ ಈ ಸರ್ಪದಂಶದ ಭೀತಿ ಹೋಯಿತು, ಸ್ವಸ್ಥದಿಂದಿರು', ಎಂದು ಕೃಪಾವಚನವನ್ನು ದಯಪಾಲಿಸಿದರು. ಇಂಥಾ ದಯಾಳುವಾದ ಆ ಸದ್ಗುರುರಾಯನು, ದೀನ ಅನಾಥರಾಗಿರುವಂಥವರನ್ನು ರಕ್ಷಣೆ ಮಾಡುತ್ತಾನೆ. ಅಭಯದಾತನೆಂಬ ತನ್ನ ಬಿರುದನ್ನು ಆತನ್ನು ಸದಾ ಜತನಮಾಡುತ್ತಿರುವನು.

ಹೇ ಶ್ರೋತಾ ಜನರುಗಳಿರಾ, ಈಗ ಕಥೆಯ ಲಕ್ಷ್ಯಾರ್ಥವನ್ನು ಕೇಳುವಂಥವರಾಗಿರಿ. ಜೀವನು ಅಜ್ಞಾನವೆಂಬ ಬಾಲ್ಯಾವಸ್ಥೆಯಲ್ಲಿ ತನ್ನ ಹಿತಾಹಿತಗಳನ್ನು ನೋಡದೆ ವಿಷಯದೊಳಗೆ ಕೈ ಹಾಕುತ್ತಾನೆ. ವಿಷಯ ಪ್ರದೇಶದಲ್ಲಿ ಆಡುತ್ತಾ ಆಡುತ್ತಾ ಮನವೆಂಬ ಕಲ್ಲಿನಿಂದ ಮೋಹವೆಂಬ ಸರ್ಪಕ್ಕೆ ಹೊಡೆದಾಕ್ಷಣವೇ ಅದು ಸಿಟ್ಟಿಗೆದ್ದು, ಆ ಅಜ್ಞಾನ ಜೀವನನ್ನು ಸುತ್ತಿ, ಅವನ ಸರ್ವಾಂಗವನ್ನು ಕಡಿಯಲಾರಂಭಿಸಿತು. ವ್ಯಾಮೋಹದಿಂದ ಸುತ್ತಲ್ಪಟ್ಟ ಜೀವನು ಬಹಳ ಚಡಪಡಿಸುತ್ತಿದ್ದು, ತನ್ನನ್ನು ಬಿಡಿಸುವಂಥವರನ್ನು ಕಾಣದೆ ಹೋದನು. ಅವನ ಉಪಾಯಗಳೇನೂ ನಡಿಯದಂತೆ ಆದವು. ಆಗ ಆತನನ್ನು ರಕ್ಷಿಸಲಿಕ್ಕೆ ಸದ್ಗುರುವು ಓಡಿಬಂದು, ಆ ಜೀವನನ್ನು ಮೋಹದಿಂದ ಬಿಡುಗಡೆ ಪಡಿಸುವಂಥವನಾದನು. ಜೀವನ ಮೈ ಮೇಲಿನ ಗಾಯಗಳೇ ಪಾಪ ಸಂಸ್ಕಾರಗಳು ಇರುತ್ತವೆ. ಅವುಗಳ ಮೇಲೆ ಸದ್ಗುರುವು ಬೋಧವೆಂಬ ಅಮೃತ ಹಸ್ತ ಎಳೆದ ಕೂಡಲೇ ಅವು ನಿರ್ವಿಷಗಳಾಗಿ ಹೋದವು. ಆಮೇಲೆ ಮನನವೆಂಬಂಥಾ

ವಿಭೂತಿ ಹಚ್ಚಿದ ಕೂಡಲೇ ಸಂಸ್ಕಾರದ ಬೀಜಗಳು ನಾಶವಾದವು. ಅಂಥಾ ಈ ಸದ್ಗುರುವಿನ ಕೃಪಾ ವಿಶೇಷವು ದೀನಜನರಿಗೋಸ್ಕರವಾಗಿಯೇ ಕಾದಿಟ್ಟಿರುವದು. ಯಾರು ಸಂಸಾರಕ್ಕೆ ಬೇಸತ್ತು ಹೋಗಿರುತ್ತಾರೋ, ಅಂತವರನ್ನು ಸತ್ಯವಾಗಿ ಆ ಸಿದ್ಧ ಸದ್ಗುರು ತಾರಣೆ ಮಾಡುತ್ತಾನೆ. ಹೇ ಗುರುವರ್ಯ, ನಿನಗೋಸ್ಕರ ನಮನ ಮಾಡುತ್ತೇನೆ. ನನ್ನ ಮೇಲಿನ ಈ ಮಾಯೆಯನ್ನು ನೀನು ಕಳೆದುಬಿಡು. ನನ್ನನ್ನು ತಾರಿಸಲಿಕ್ಕೆ ನೀನು ಸಿದ್ಧನಾಗು. ನಿನ್ನ ಚರಣಗಳಲ್ಲಿ ನನ್ನ ಮಸ್ತಕವನ್ನಿಡುವೆನು. ನನ್ನ ಮತಿಯು ಶುದ್ಧವಿಲ್ಲ, ನಾನು ಸಂಸಾರದಲ್ಲಿ ಬದ್ಧನಾಗಿದ್ದೇನೆ, ಇಂಥಾ ನನ್ನ ದೀನನ ಶಬ್ದವು ನಿನ್ನ ಕಿವಿಯಲ್ಲಿ ಹ್ಯಾಗೆ ಬಿದ್ದೀತು. ಆದರೆ ನೀನು ಕೃಪಾನಿಧಿ ಇರುವಿ, ಎಂದು ನನ್ನ ಬುದ್ಧಿಯು ಹೇಳುತ್ತದೆ. ಕಾಲಾಂತರದಲ್ಲಿಯಾದರೂ ನೀನು ಕೃಪಾ ಮಾಡುವಿ, ಎಂಬ ನಿಶ್ಚಯದಿಂದ ನಾನು ಧೈರ್ಯ ಬಿಡುವದಿಲ್ಲ. ನೀನು ಎಂದು ಕೃಪಾ ಮಾಡುವಿಯೋ, ಆ ಕ್ಷಣದಲ್ಲಿ ನನ್ನ ಭವಬಂಧನವು ಹಾರಿ ಹೋಗುವುದು. ಆ ಸುದಿನವು ಎಂದು ಬಂದಿತು, ಎಂದು

ನಾನು ದಾರಿ ನೋಡುತ್ತಿದ್ದೇನೆ. ಹೇ ಶ್ರೋತಾ ಜನರುಗಳಿರಾ, ಮುಂದಿನ ಅಧ್ಯಾಯದಲ್ಲಿ ಅತಿರಸಯುಕ್ತವಾದ ಕಥನವನ್ನೇ ಕೇಳುವಂಥವರಾಗಿರಿ, ಅದರ ಶ್ರವಣ ಮಾತ್ರದಿಂದ ಅಜ್ಞಾನ ರೂಪ ತಮವು ನಿರಸನವಾಗುವದು. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಬಹು ಮಧುರವಾದ ಈ ಹದಿನಾರನೇ ಅಧ್ಯಾಯವನ್ನು ಶಿವದಾಸನು ಶ್ರೀಗುರು ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.